

# ತೈಮೂರನ ತಾಯಿ

ಕರೀನಾ ಕಪೂರ್‌ಗಿಂತ ಹೆಚ್ಚು ಮಾಧ್ಯಮಗಳಲ್ಲಿ ಸುದ್ದಿ ಮಾಡುತ್ತಿರುವಾತ ಆಕೆಯ ಮಗ ತೈಮೂರ್.

ಕರೀನಾ ಕೈಯಲ್ಲಿ ಸದ್ಯಕ್ಕೆ ಯಾವುದೇ ಸಿನಿಮಾಗಳಿಲ್ಲ. ಆದರೆ ಆಕೆಯ ಕುರಿತ ಸುದ್ದಿಗಳಿಗೇನೂ ಬರವಿಲ್ಲ. ಪ್ರತಿಯೊಂದು ಸುದ್ದಿಯೂ ಆಕೆಯ ಮಗನಿಗೆ ಸಂಬಂಧಿಸಿದ್ದು ಎನ್ನುವುದು ಮಾತ್ರ ವಿಶೇಷ. ಕರೀನಾ ಇತ್ತೀಚೆಗೆ ರೇಡಿಯೊ ಷೋಗಳಲ್ಲಿ ಸುದ್ದಿ ಮಾಡುತ್ತಿದ್ದಾಳೆ. ಇತ್ತೀಚಿನ ರೇಡಿಯೋ ಟಾಕ್ ಒಂದರಲ್ಲಿ ಆಕೆ ತನ್ನ ಹಲವು ವರ್ಷಗಳ ಮನದಾಸೆಯೊಂದನ್ನು ಬಹಿರಂಗಪಡಿಸಿದ್ದಾಳೆ. 'ಸಂಜಯ ಲೀಲಾ ಬನ್ಸಾಲಿ ನಿರ್ದೇಶನದ ಚಿತ್ರದಲ್ಲಿ ನಟಿಸಬೇಕು' ಎನ್ನುವುದು ಆಕೆಯ ಮನದಾಸೆ. ಈ ಹಿಂದೆ ಬನ್ಸಾಲಿ ನಿರ್ದೇಶನದ 'ಬಾಜಿರಾವ್ ಮಸ್ತಾನಿ' ಸಿನಿಮಾದಲ್ಲಿ ಆಕೆ ಮಸ್ತಾನಿಯ ಪಾತ್ರ ಮಾಡಬೇಕಿತ್ತು. ಆಗ ಸಲ್ಮಾನ್ ಖಾನ್ ಬಾಜಿರಾವ್ ಪಾತ್ರ ಮಾಡಲು ಒಪ್ಪಿಕೊಂಡಿದ್ದ. ಪೋಸ್ಟರ್ ಶೂಟಿಂಗ್ ನಡೆಯಿತು. ಆದರೆ ಸಿನಿಮಾ ಶೂಟಿಂಗ್ ಯಾಕೋ ಮುಂದಕ್ಕೆ ಹೋಯಿತು. ಕೆಲವು ವಾರಗಳ ಕಾಲ ಕಾದ ಕರೀನಾ ಸಿನಿಮಾದಿಂದ ಹೊರನಡೆದಳು. ಅದಾಗಿ ಕೆಲವು ವಾರಗಳ ಬಳಿಕ ಸಿನಿಮಾ ಶೂಟಿಂಗ್ ಶುರುವಾಯಿತು. ಸಲ್ಮಾನ್ ಮತ್ತು ಕರೀನಾ ಬದಲಿಗೆ ರಣವೀರ್ ಸಿಂಗ್ ಮತ್ತು ದೀಪಿಕಾ ಪಡುಕೋಣೆ, ಹೀರೊ ಮತ್ತು ಹೀರೋಯಿನ್ ಆದರು. ಅಲ್ಲಿಂದ ಆರಂಭವಾದ ಅವರಿಬ್ಬರ ನಿಜಜೀವನದ ಪ್ರೇಮ ಈಗ ಮದುವೆಯಲ್ಲಿ ಪರ್ಯವಸಾನವಾಗಿದೆ.

ಆ ಬಳಿಕ ಕರೀನಾ ಮತ್ತು ಬನ್ಸಾಲಿ ನಡುವೆ ಅಂತಹ ಒಳ್ಳೆಯ ಸಂಬಂಧ ಇರಲಿಲ್ಲ. ಬನ್ಸಾಲಿಯವರು ಆ ಬಳಿಕ ಮಾಡಿದ 'ರಾಮ್‌ಲೀಲಾ' ಸಿನಿಮಾ ಕೂಡಾ ಭರ್ಜರಿ ಯಶಸ್ಸು ಕಂಡಿತು. ಅದರಲ್ಲೂ ದೀಪಿಕಾ ಮತ್ತು ರಣ್‌ವೀರ್ ಸಖತ್ತಾಗಿ ಮಿಂಚಿದರು. ಈಗ ಕರೀನಾಗೆ ತನ್ನ ತಪ್ಪಿನ ಅರಿವಾದಂತಿದೆ.

ಆದರೆ ಸದ್ಯಕ್ಕಂತೂ ಬನ್ಸಾಲಿಯವರ ನಿರ್ದೇಶನದಲ್ಲಿ ಕರೀನಾ ನಟಿಸುವ ಸಾಧ್ಯತೆ ಇಲ್ಲ. ಏಕೆಂದರೆ ಆಕೆಯೇ ಹೇಳಿದ ಪ್ರಕಾರ, ತೈಮೂರನಿಗೆ ಈಗ ಕೇವಲ ಎರಡು ವರ್ಷ. 'ತೈಮೂರನಿಗೆ ಕನಿಷ್ಠ 10 ವರ್ಷವಾದರೂ ಆಗದೆ ನಾನು ಮತ್ತೆ ಸಿನಿಮಾದಲ್ಲಿ ನಟಿಸುವುದಿಲ್ಲ' ಎಂದಿದ್ದಾಳೆ ಕರೀನಾ. ಇತ್ತೀಚೆಗೆ ತೈಮೂರನನ್ನು ಬೋರ್ಡಿಂಗ್ ಸ್ಕೂಲ್‌ಗೆ ಸೇರಿಸಬೇಕೆಂದು ಗಂಡ ಸೈಫ್ ಅಲಿ ಖಾನ್ ಸಲಹೆ ಮಾಡಿದಾಗಲೂ ಕರೀನಾ ಬಿಲ್‌ಕುಲ್ ಒಪ್ಪಿಲ್ಲ. 'ಸಾಧ್ಯವೇ ಇಲ್ಲ. ಏನಿದ್ದರೂ ಮಗ ನನ್ನ ಜತೆಗೇ ಮನೆಯಲ್ಲಿ ಇರಬೇಕು' ಎಂದಿದ್ದಾಳೆ ಆಕೆ. ಈ ಮಧ್ಯೆ ಕರಣ್ ಜೋಹರ್ ನಿರ್ಮಾಣದ 'ಗುಡ್ ನ್ಯೂಸ್' ಎನ್ನುವ ಚಿತ್ರದಲ್ಲಿ ಅಕ್ಷಯ ಕುಮಾರ್ ಜತೆಗೆ ಕರೀನಾ ನಟಿಸುತ್ತಿರುವ ಸುದ್ದಿಯೂ ಬಂದಿದೆ!

# ಮಲ್ಲೈಕಾ ಮದುವೆ?

ಮಲ್ಲೈಕಾ ಆರೋರ ಸದ್ಯಕ್ಕೆ ಅರ್ಜುನ್ ಕಪೂರ್ ಜತೆಗಿನ ತನ್ನ ಮದುವೆಯ ಬಗ್ಗೆ ಸ್ಪಷ್ಟವಾಗಿ ಏನನ್ನೂ ಹೇಳುತ್ತಿಲ್ಲ. ಆದರೆ ಈ ಜೋಡಿ ಬಾಲಿವುಡ್‌ನ ಸಮಾರಂಭಗಳಲ್ಲಿ ಬಿಂದಾಸ್ ಆಗಿ ಜತೆಗೂಡಿ ಹಾಜರಿ ಹಾಕುತ್ತಿರುವುದಂತೂ ನಿಂತಿಲ್ಲ. ಅರ್ಜುನ್ ಕಪೂರ್ ಜತೆಗೆ ಮಲ್ಲೈಕಾ ಮದುವೆಯಾಗಿದೆ ಎನ್ನುವ ಸುದ್ದಿ ಹಬ್ಬಿ ತಿಂಗಳುಗಳೇ ಕಳೆದಿವೆ. ಈ ಕುರಿತು ಸುದ್ದಿಗಾರರು ಇತ್ತೀಚೆಗೆ ನಯವಾಗಿಯೇ ಪ್ರಶ್ನಿಸಿದ್ದರು. ಅಷ್ಟೇ ನಗುಮುಖದಿಂದ ಉತ್ತರಿಸಿದ ಮಲ್ಲೈಕಾ 'ನಾನು ಖಾಸಗಿ ವಿಷಯಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಉತ್ತರಿಸುವುದಿಲ್ಲ, ಕ್ಷಮಿಸಿ' ಎಂದಳು. 'ನನಗೆ ಉತ್ತರಿಸಲು ಸಂಕೋಚವೇನೂ ಇಲ್ಲ. ಆದರೆ ವೈಯಕ್ತಿಕ ವಿಷಯಗಳನ್ನು ಮಾತನಾಡುವುದು ನನಗೆ ಇಷ್ಟವಿಲ್ಲ' ಎಂದೂ ಸೇರಿಸಿದಳು. 'ಸದ್ಯಕ್ಕಂತೂ ನಾನು ಜೀವನವನ್ನು ಅನುಭವಿಸುತ್ತಿದ್ದೇನೆ. ಜೀವನ ನಿಜಕ್ಕೂ ಸಂತೋಷಕರವಾಗಿದೆ' ಎನ್ನುವುದು ಆಕೆಯ ಕೊನೆಯ ಮಾತಾಗಿತ್ತು. ಸಲ್ಮಾನ್ ಖಾನ್‌ನ ಸೋದರ ನಟ, ನಿರ್ಮಾಪಕ ಅರ್ಬಾಜ್ ಖಾನ್ ಜತೆಗಿನ ಮದುವೆ ಎರಡು ವರ್ಷಗಳ ಹಿಂದೆ ಮುರಿದು ಬಿದ್ದ ನಂತರ ಮಲ್ಲೈಕಾ ಕೆಲವು ತಿಂಗಳ ಕಾಲ ಬಾಲಿವುಡ್‌ನಲ್ಲಿ ಅಷ್ಟಾಗಿ ಕಾಣಿಸಿಕೊಂಡಿರಲಿಲ್ಲ. ಆದರೆ ಈಗ ಮೊದಲಿನಂತೆಯೇ ನಗು ಚಿಮ್ಮಿಸುತ್ತಾ ಓಡಾಡುತ್ತಿದ್ದಾಳೆ. ಈ ಮಧ್ಯೆ ಅರ್ಬಾಜ್ ತನ್ನ ಹೊಸ ಗರ್ಲ್‌ಫ್ರೆಂಡ್ ಜಾರ್ಜಿಯಾ ಅಂಡ್ರಿಯಾನಿ ಜತೆಗೆ ಬಾಲಿವುಡ್‌ನ ಎಲ್ಲ ಸಮಾರಂಭಗಳಲ್ಲೂ ಕಳೆಕಳೆಯಾಗಿ ಓಡಾಡುತ್ತಿದ್ದಾನೆ. ಅವರಿಬ್ಬರೂ ಮದುವೆಯಾಗಿದ್ದಾರೆ ಎನ್ನುವ ಸುದ್ದಿಯೂ ಹರಡಿದೆ.



■ ಬಿಂದು